ಪ್ರ-72-114

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72ರ ಅಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

### ಸೂಚನೆ:

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು ಬೇರ್ಪಡಿಸಿ ಚಿಕ್ಕಬಳ್ಳಾಪುರಕ್ಕೆ ಪ್ರತ್ಯೇಕ ಒಕ್ಕೂಟ ಮಾಡಲು ಸರ್ಕಾರದ ಆದೇಶ ನೀಡಿದೆ.

ಕೋಚಿಮುಲ್ ವ್ಯಾಪ್ತಿಯ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1870 ಪ್ರಾಥಮಿಕ ಹಾಲು ಸಹಕಾರ ಸಂಘಗಳಿದ್ದು, ಸುಮಾರು 2.87 ಲಕ್ಷ ಹಾಲು ಉತ್ಪಾದಕರು ಒಕ್ಕೂಟದ ಸದಸ್ಯರಾಗಿದ್ದಾರೆ. ಒಕ್ಕೂಟದಲ್ಲಿ ಪ್ರತಿನಿತ್ಯ ಸುಮಾರು 9.50 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದ್ದು, ಒಕ್ಕೂಟವು ಹಾಲು ಉತ್ಪಾದನೆಯಲ್ಲಿ ರಾಜ್ಯದಲ್ಲಿ 2ನೇ ಸ್ಥಾನದಲ್ಲಿರುವುದು, ಕೋಲಾರ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ.

ಕೋಲಾರ ಜಿಲ್ಲೆಯಲ್ಲಿ ದಿನಕ್ಕೆ 5.5 ಲಕ್ಷ ಲೀಟರ್ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 4 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಕೋಲಾರ ಜಿಲ್ಲಾ ಕೇಂದ್ರದಲ್ಲಿರುವ ಹಾಲಿನ ಡೇರಿಯು ಸುಮಾರು 30 ವರ್ಷಗಳ ಹಳೆಯಾದಿದ್ದು, ಇಲ್ಲಿನ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳು ಹಳೆಯದಾಗಿದ್ದು, ಡೇರಿ ಚಟುವಟಿಕೆಗಳಿಗೆ ಹಿನ್ನೆಡೆಯಾಗುತ್ತಿದ್ದ ಕಾರಣ, ಒಕ್ಕೂಟ ವಿಭಜನೆಗೂ ಮುನ್ನಾ ಅತ್ಯಾಧುನಿಕ ತಂತ್ರಜ್ಞಾನದ ಮೆಗಾ ಡೇರಿ ಸ್ಥಾಪಿಸಬೇಕೆಂಬುದು ಜಿಲ್ಲೆಯ ರೈತರ ಬೇಡಿಕೆಯಾಗಿತ್ತು.

ಮುಂದುವರೆದಂತೆ, ಹಾಲು ಉತ್ಪಾದಿಸುವ ರೈತರಿಗೆ ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು ಹಾಗೂ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ರೈತರಿಗೆ ಬಹಳ ಕಷ್ಟಕರವಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಹಾಲು ಉತ್ಪಾಕರಿಗೆ ನೀಡಲಾಗುತ್ತಿರುವ ಹಾಲಿನ ದರಕ್ಕೂ, ನಮ್ಮ ರಾಜ್ಯದಲ್ಲಿ ನೀಡಲಾಗುತ್ತಿರುವ ಹಾಲಿನ ದರಕ್ಕೂ ಬಹಳ ಅಂತರವಿದೆ. ಹಾಲು ಉತ್ಪಾದಿಸುವ ರೈತರಿಗೆ ಲೀಟರಿಗೆ ಕೇವಲ ರೂ.24/- ರೂಪಾಯಿಗಳನ್ನು ನೀಡಿ ಮಾರಾಟ ದರ ರೂ.42 ರಿಂದ 48 ರೂಪಾಯಿಯನ್ನು ಗ್ರಾಹಕರಿಂದ ಪಡೆಯಲಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ ಆದರೆ, ಈ ರೀತಿಯ ತಾರತಮ್ಯ ಏಕೆ? ಈ ವಿಷಯ ಸಾರ್ವಜನಿಕ ಮಹತ್ವದಾಗಿರುವುದರಿಂದ, ಈ ವಿಷಯವನ್ನು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

### ಉತ್ತರ:

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಉಭಯ ಜಿಲ್ಲೆಗಳ 11 ತಾಲ್ಲೂಕುಗಳ ವ್ಯಾಪ್ತಿಯಲ್ಲಿ 3613 ಗ್ರಾಮಗಳಲ್ಲಿ 1893 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಪ್ರತಿ ದಿನ ಒಟ್ಟು 9.67 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದ್ದು, ಅದನ್ನು ಹಾಲು ಮೊಸರು ಮತ್ತು ಹಾಲಿನ ಉತ್ಪನ್ನಗಳ ರೂಪದಲ್ಲಿ ರಾಜ್ಯದ ಹೊರ ಮತ್ತು ಒಳಭಾಗಗಳಲ್ಲಿ ಹಾಗೂ ಬೆಂಗಳೂರು ಮತ್ತು ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳ ತಾಲ್ಲೂಕುಗಳಲ್ಲಿನ ಮಾರುಕಟ್ಟೆ ಪ್ರದೇಶಗಳಲ್ಲಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ.

...2

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಹಾಗೂ ಗೌರಿಬಿದನೂರಿನಲ್ಲಿ ದಿನಂಪ್ರತಿ ತಲಾ 1.00 ಲಕ್ಷ ಲೀಟರ್ ಸಾಮರ್ಥ್ಯದ ಶೀತಲೀಕರಣ ಕೇಂದ್ರಗಳನ್ನು ಒಳಗೊಂಡಿರುತ್ತದೆ.

ದಿನಾಂಕ:31.03.2017 ರಂದು ನಡೆದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ 28ನೇ ಆಡಳಿತ ಮಂಡಳಿ ಸಭೆಯಲ್ಲಿ ಒಕ್ಕೂಟ ವಿಭಜನೆಯ ಬಗ್ಗೆ ಚರ್ಚಿಸಿ ದಿನಾಂಕ:23.09.2016 ರಂದು ನಡೆದ ಹಾಗೂ ದಿನಾಂಕ:23.09.2017 ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ರಚಿಸಲು ತೀರ್ಮಾನಿಸಲಾಗಿರುತ್ತದೆ.

ಎನ್.ಡಿ.ಡಿ.ಬಿ. ಯ ನಿವೃತ್ತ ಅಧಿಕಾರಿಯವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟವನ್ನು ವಿಭಜಿಸಿ ಹೊಸದಾಗಿ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ರಚಿಸಿದಲ್ಲಿ, ಜಿಲ್ಲೆಯಲ್ಲಿ ಹೈನುಗಾರಿಕಾ ಚಟುವಟಿಕೆಗಳನ್ನು ಹಾಲು ಉತ್ಪಾದಕರ ಹಿತದೃಷ್ಟಿಯಿಂದ ವಿಸ್ತರಿಸಲು ಹೆಚ್ಚಿನ ಅವಕಾಶವಿದ್ದು, ಕೋಲಾರ ಮತ್ತು ಚಿಕ್ಕಬಳ್ಳಾಪುರ ವಿಭಜನೆಯಿಂದ ಉದ್ದೇಶಿತ ಜಿಲ್ಲಾ ಹಾಲು ಒಕ್ಕೂಟಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವ ಸಾಧ್ಯತೆ ಇದೆಯೆಂದು ಅಭಿಪ್ರಾಯಿಸಿ ವರದಿ ನೀಡಿರುತ್ತಾರೆ.

ಅದರನ್ವಯ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟವನ್ನು ವಿಭಜಿಸಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟವನ್ನು ರಚಿಸಲು ದಿನಾಂಕ:08.11.2021 ರಂದು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದ್ದು, ಸಚಿವ ಸಂಪುಟದ ಅನುಮೋದನೆಯಂತೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟವನ್ನು ರಚಿಸಲು ಷರತ್ತುಗಳೊಂದಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರವು ದಿನಾಂಕ:17.12.2021 ರಂದು ಆದೇಶ ಹೊರಡಿಸಲಾಗಿದೆ. ಸಹಕಾರ ಸಂಘಗಳ ನಿಬಂಧಕರು ಒಕ್ಕೂಟದ ಸಿಬ್ಬಂದಿ ಮತ್ತು ಮಾರುಕಟ್ಟೆ ಸೌಕರ್ಯ ಹಾಗೂ ಆಸ್ತಿ-ಜವಾಬ್ದಾರಿ ವಿಂಗಡಣೆ ಸಂಬಂಧ ದಿನಾಂಕ:20.11.2021 ರಂದು ಸಮಿತಿ ನೇಮಿಸಿ ಆದೇಶಿಸಿರುತ್ತಾರೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟವನ್ನು ವಿಭಜಿಸಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟವನ್ನು ರಚಿಸಲು ಈಗಾಗಲೇ ಕ್ರಮವಹಿಸಿರುವುದರಿಂದ ಕೋಲಾರ ಜಿಲ್ಲೆಗೆ ಅತ್ಯಾಧುನಿಕ ತಂತ್ರಜ್ಞಾನದ ಮೆಗಾ ಡೈರಿ ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದದ ಪರಿಶೀಲನೆಯಲ್ಲಿಇರುವುದಿಲ್ಲ. ಪ್ರತ್ಯೇಕ ಜಿಲ್ಲಾ ಒಕ್ಕೂಟ ರಚನೆಯಾದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಕೋವಿಡ್-19ರ ಅಲೆಗೆ ಮುನ್ನ ಪ್ರತಿದಿನ 66 ಲಕ್ಷ ಲೀಟರ್ ಹಾಲು ಸಂಗ್ರಹಣೆ ಇದ್ದು, ಜೂನ್ 2020 ಕ್ಕೆ 85 ಲಕ್ಷ ಲೀಟರ್‌ಗಳಿಗೆ ಹೆಚ್ಚಳವಾಯಿತು. ಇದರಿಂದ ಪ್ರತಿದಿನ 35 ಲಕ್ಷ ಲೀಟರ್ ಹೆಚ್ಚುವರಿ ಹಾಲನ್ನು ಹಾಲಿನ ಪುಡಿಯಾಗಿ ಪರಿವರ್ತನೆ ಮಾಡುವ ಅನಿವಾರ್ಯ ಸಂದರ್ಭ ಉಂಟಾಯಿತು. ಈ ಸಂದರ್ಭದಲ್ಲಿ ಹಾಲಿನ ಪುಡಿ ದರ ಪ್ರತಿ ಕೆ.ಜಿ.ಗೆ ರೂ.230/- ರಿಂದ ರೂ.170 ರಿಂದ 180 ಕ್ಕೆ ಕುಸಿಯಿತು. ಜೊತೆಗೆ ಸಾಗಾಣಿಕೆ ವೆಚ್ಚ ಪ್ಯಾಕಿಂಗ್ ವೆಚ್ಚವು ಪ್ರತಿಶತ ಶೇ.15 ರಿಂದ 20 ರಷ್ಟು ಹೆಚ್ಚಾಗಿ ಒಟ್ಟಾರೆ ಒಕ್ಕೂಟಗಳ ಆರ್ಥಿಕ ಸ್ಥಿತಿಯ ಮೇಲೆ ತೀವ್ರ ಪರಿಣಾಮ ಉಂಟಾಗಿರುತ್ತದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ಸಹ ಹಾಲು ಉತ್ಪಾದಕರು ಸರಬರಾಜು ಮಾಡಿದ ಸಂಪೂರ್ಣ ಹಾಲನ್ನು ಸ್ವೀಕರಿಸಿ ಸಂಸ್ಕರಿಸಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಹಾಲು ಶೇಖರಣೆ ದರವನ್ನು ಕೆಲವು ಒಕ್ಕೂಟಗಳು ಅನಿವಾರ್ಯವಾಗಿ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುತ್ತವೆ.

ರಾಜ್ಯದಾದ್ಯಂತ ಇರುವ 14 ಜಿಲ್ಲಾ ಹಾಲು ಒಕ್ಕೂಟಗಳು ತಮ್ಮದೇ ಆದ ಚುನಾಯಿತ ಆಡಳಿತ ಮಂಡಲಿಗಳನ್ನು ಹೊಂದಿದ್ದು, ಆರ್ಥಿಕ ಸ್ಥಿತಿಗತಿ ಮತ್ತು ವಹಿವಾಟಿಗೆ ಅನುಗುಣವಾಗಿ ಸಂಸ್ಥೆ, ಉತ್ಪಾದಕರು ಮತ್ತು ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಕಾಲಕಾಲಕ್ಕೆ ಹಾಲಿನ ಖರೀದಿ ಮತ್ತು ಮಾರಾಟ ದರವನ್ನು ಪರಿಷ್ಕರಣೆ ಮಾಡುತ್ತವೆ. ಸುಗ್ಗಿ ಕಾಲದಲ್ಲಿ ಅಧಿಕ ಹಾಲು ಶೇಖರಣೆಯಾಗುವ ಸಮಯದಲ್ಲಿ ಹಾಲಿನ ದರವನ್ನು ತಗ್ಗಿಸುವುದು ಮತ್ತು ಬೇಸಿಗೆ ಕಾಲದಲ್ಲಿ ದರವನ್ನು ಹೆಚ್ಚಿಸುವುದು ವಾಡಿಕೆ ಕ್ರಮವಾಗಿರುತ್ತದೆ. ಪ್ರಸ್ತುತ ಸಂಘದಿಂದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ಸರಾಸರಿ ರೂ.26.27 ನೀಡಲಾಗುತ್ತಿದೆ.

ಅಲ್ಲದೇ ಹೈನುಗಾರ ರೈತರಿಗೆ ಗುಣಮಟ್ಟದ ಪಶು ಆಹಾರವನ್ನು ಕಡಿಮೆ ದರದಲ್ಲಿ ಸರಬರಾಜು, ತುರ್ತು ಚಿಕಿತ್ಸಾ ಸೌಲಭ್ಯವನ್ನು ರಾಸುಗಳಿಗೆ ಒದಗಿಸುವುದು, ರಿಯಾಯಿತಿ ದರದಲ್ಲಿ ಮೇವಿನ ಬೆಳೆ ಬೀಜ ಮತ್ತು ಬೇರುಗಳ ಪೂರೈಕೆ ವರ್ಷಕ್ಕೊಮ್ಮೆ ಹಾಲು ಉತ್ಪಾದಕರಿಗೆ ಸರಾಸರಿ ಪ್ರತಿ ಲೀಟರ್‌ಗೆ 12 ರಿಂದ 13 ಪೈಸೆ ಬೋನಸ್ ನೀಡಿಕೆಯಿಂದಾಗಿ ಹೈನುಗಾರರು ಸರಬರಾಜು ಮಾಡುವ ಪ್ರತಿ ಲೀಟರ್ ಹಾಲಿಗೆ 66 ಪೈಸೆಯಷ್ಟು ಪ್ರೋತ್ಸಾಹಕರ ಸೇವಾ ಸೌಲಭ್ಯ ನೀಡಿದಂತಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆ ಪರಿಸ್ಥಿತಿ ಸುಧಾರಿಸುತ್ತಿದ್ದು, ಉತ್ಪಾದಕರಿಗೆ ಹಾಲಿನ ದರವನ್ನು ಹೆಚ್ಚಿಸಲು ಸಾಧ್ಯವಾಗಬಹುದು.ಹಾಲು ಶೇಖರಣೆ ಪ್ರಮಾಣ ಹಾಗೂ ಮಾರುಕಟ್ಟೆ ಪರಿಸ್ಥಿತಿಗಳನ್ನು ಅನುಸರಿಸಿ ಹಾಲು ಉತ್ಪಾದಕರಿಗೆ ನೀಡುವ ದರ ಮತ್ತು ಗ್ರಾಹಕರ ಮಾರಾಟ ದರವನ್ನು ಸಮತೋಲನಗೊಳಿಸಲಾಗುತ್ತದೆ.

**ಸಂಖ್ಯೆ: ಸಿಒ 232 ಸಿಸಿಬಿ 2021**

(signature)
**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**